**Akashvani : Bangalore**
**National Bulletin In Kannada**
**02.03.2025 / 7.35 am**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**02.03.2025 / 7.35 am**

**<><*<><>*><>**

ಮುಖ್ಯಾಂಶಗಳು

೧. ಪ್ರಧಾನಿ ನರೇಂದ್ರ ಮೋದಿ ಮೂರು ದಿನಗಳ ಗುಜರಾತ್ ಪ್ರವಾಸ; ಇಂದು ವನ್ಯಜೀವಿ ಸಂರಕ್ಷಣೆ ಮತ್ತು ಪುನರ್‌ವಸತಿ ಕೇಂದ್ರ ವಂತಾರಾಕ್ಕೆ ಭೇಟಿ

೨. ಪ್ರಯಾಗ್‌ರಾಜ್ ಮಹಾಕುಂಭಮೇಳದ ಉತ್ತಮ ಆಯೋಜನೆಯನ್ನು ಶ್ಲಾಘಿಸಿದ ಯುಎಇ ಪ್ರತಿಕೆಗಳು

೩. ಕಳೆದ ವರ್ಷಕ್ಕೆ ಹೋಲಿಸಿದರೆ, ೨೦೨೫ ಫೆಬ್ರವರಿಯಲ್ಲಿ ಶೇಕಡ ೯.೧ ರಷ್ಟು ಹೆಚ್ಚಿನ ಜಿಎಸ್‌ಟಿ ಸಂಗ್ರಹ

೪. ಐಸಿಸಿ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್; ಇಂಗ್ಲೆಂಡ್ ವಿರುದ್ಧ ಗೆದ್ದು, ಸೆಮಿಫೈನಲ್ಸ್ ಪ್ರವೇಶಿಸಿದ ದಕ್ಷಿಣ ಆಫ್ರಿಕಾ

**<><*<><>*><>**

ಪ್ರಧಾನಿ ನರೇಂದ್ರ ಮೋದಿ ಅವರು ಮೂರು ದಿನಗಳ ಭೇಟಿಗಾಗಿ ನಿನ್ನೆ ಸಂಜೆ ಗುಜರಾತ್‌ನ ಜಾಮ್‌ನಗರಕ್ಕೆ ಆಗಮಿಸಿದರು. ಮುಂದಿನ ಎರಡು ದಿನಗಳಲ್ಲಿ ಅವರು, ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಇಂದು ಅವರು, ಜಾಮ್‌ನಗರದಲ್ಲಿರುವ ಅತ್ಯಾಧುನಿಕ ವನ್ಯಜೀವಿ ಸಂರಕ್ಷಣೆ ಮತ್ತು ಪುನರ್‌ವಸತಿ ಕೇಂದ್ರವಾದ ವಂತಾರಾಕ್ಕೆ ಭೇಟಿ ನೀಡಲಿದ್ದಾರೆ. ಸುಮಾರು ೩ ಸಾವಿರ ಎಕರೆ ಪ್ರದೇಶದಲ್ಲಿ ವ್ಯಾಪಿಸಿರುವ ವಂತಾರಾ, ರಕ್ಷಿಸಲ್ಪಟ್ಟ ವನ್ಯಜೀವಿಗಳು ಹಾಗೂ ಅಳಿವಿನಂಚಿನಲ್ಲಿರುವ ಪ್ರಬೇಧಗಳಿಗೆ ಅಭಯಾರಣ್ಯವಾಗಿ ಕಾರ್ಯನಿರ್ವಹಿಸುತ್ತಿದೆ. ನಂತರ ಪ್ರಧಾನಿ, ಸಸನ್ ಗಿರ್ ರಾಷ್ಟ್ರೀಯ ಉದ್ಯಾನವನಕ್ಕೆ ಭೇಟಿ ನೀಡಲಿದ್ದಾರೆ. ಇದರ ಜತೆಗೆ ಪ್ರಧಾನಿ, ಜುನಾಗಢ್‌ನಲ್ಲಿ ರಾಷ್ಟ್ರೀಯ ವನ್ಯಜೀವಿ ಮಂಡಳಿ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ವನ್ಯಜೀವಿ ಸಂರಕ್ಷಣಾ ನೀತಿಗಳು ಹಾಗೂ ರಾಷ್ಟ್ರೀಯ ಉದ್ಯಾನವನಗಳು ಹಾಗೂ ಅಭಯಾರಣ್ಯಗಳ ರಕ್ಷಣೆ ಕುರಿತು ಸಲಹೆ

ನೀಡುವಲ್ಲಿ ಈ ಮಂಡಳಿ ಪ್ರಮುಖ ಪಾತ್ರವಹಿಸುತ್ತದೆ. ಬಳಿಕ ಅವರು ಸೋಮನಾಥ ದೇವಾಲಯದಲ್ಲಿ ಪ್ರಾರ್ಥನೆ ಸಲಿಸಲಿದ್ದು, ಅನಂತರ ದೇವಾಲಯವನ್ನು ನಿರ್ವಹಿಸುವ ಶ್ರೀ ಸೋಮನಾಥ ಟ್ರಸ್ಟ್‌ನ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ.

<><*<><>*><>

ಕೃಷಿ ಕ್ಷೇತ್ರದ ಬೆಳವಣಿಗೆ ಮತ್ತು ಗ್ರಾಮೀಣ ಸಮೃದ್ಧಿ ಎಂಬ ಎರಡು ಗುರಿಗಳೊಂದಿಗೆ ಕೇಂದ್ರ ಸರ್ಕಾರ ಮುನ್ನಡೆಯುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಕೃಷಿ ಮತ್ತು ಗ್ರಾಮೀಣ ಸಮೃದ್ಧಿ ಕುರಿತಾದ ಬಜೆಟ್ ನಂತರದ ವೆಬಿನಾರ್ ಉದ್ದೇಶಿಸಿ ಮಾತನಾಡಿದ ಅವರು, ಅಭಿವೃದ್ಧಿ ಹೊಂದಿದ ಭಾರತದ ಗುರಿಯತ್ತ ಸಾಗುವ ಸಂಕಲ್ಪ ಸ್ಪಷ್ಟವಾಗಿದೆ. ರೈತರ ಸಮೃದ್ಧಿ ಮತ್ತು ಸಬಲೀಕರಣವನ್ನು ಖಾತರಿಪಡಿಸುವ ಭಾರತವನ್ನು ನಿರ್ಮಿಸುವತ್ತ ಒಗ್ಗಟ್ಟಾಗಿ ಕಾರ್ಯ ನಿರ್ವಹಿಸಲಾಗುತ್ತಿದೆ ಎಂದರು. ದೇಶದಲ್ಲಿ ಕಡಿಮೆ ಕೃಷಿ ಉತ್ಪಾದಕತೆ ಹೊಂದಿರುವ ನೂರು ಜಿಲ್ಲೆಗಳ ಅಭಿವೃದ್ಧಿಗಳ ಮೇಲೆ ಕೇಂದ್ರೀಕರಿಸಿ ಕೇಂದ್ರ ಸರ್ಕಾರ 'ಪಿಎಂ ಧನ ಧಾನ್ಯ ಕೃಷಿ' ಯೋಜನೆಯನ್ನು ಘೋಷಿಸಿದೆ ಎಂದು ಪ್ರಧಾನಿ ತಿಳಿಸಿದರು.

ಧ್ವನಿ: ಪ್ರಧಾನಿ ನರೇಂದ್ರ ಮೋದಿ ( ೨೮ ಸೆಕೆಂಡ್‌ಗಳು)

<><*<><>*><>

ಜಾಗತಿಕ ಆಕರ್ಷಣೆ, ಸುಗಮ ಸಂಘಟನೆ ಮತ್ತು ವಿಶ್ವದ ಅತಿದೊಡ್ಡ ಧಾರ್ಮಿಕ ಸಭೆಗಳಲ್ಲಿ ಒಂದಾದ ಇತ್ತೀಚೆಗೆ ಮುಕ್ತಾಯಗೊಂಡ ಪ್ರಯಾಗ್‌ರಾಜ್ ನ ಕುಂಭಮೇಳದಲ್ಲಿ ಯುಎಇ ನಿವಾಸಿಗಳ ಭಾಗವಹಿಸುವಿಕೆಯನ್ನು ಎತ್ತಿ ತೋರಿಸಿರುವ ಯುಎಇಯ ಪತ್ರಿಕೆಗಳು ಅದರ ಉತ್ತಮ ಆಯೋಜನೆಯನ್ನು ಶ್ಲಾಘಿಸಿವೆ. ಯುಎಇ ಯ ವೆ. ಗಲ್ಫ್ ನ್ಯೂಸ್, ಖಲೀಜ್ ಟೈಮ್ಸ್, ಗಲ್ಫ್ ಟುಡೇ ಮತ್ತು ದಿ ನ್ಯಾಷನಲ್‌ನಂತಹ ಪ್ರತ್ರಿಕೆಗಳು ಕುಂಭಮೇಳದ ಸಾಂಸ್ಕೃತಿಕ ಶ್ರೀಮಂತಿಕೆ, ಆಧ್ಯಾತ್ಮಿಕ ಮಹತ್ವ ಮತ್ತು ಆಯೋಜನೆ ಕುರಿತು ಅಚ್ಚರಿ ವ್ಯಕ್ತಪಡಿಸಿವೆ. ಮಹಾ ಕುಂಭವು ಅಂದಾಜು ೩೩೦ ಮಿಲಿಯನ್ ಪ್ರೇಕ್ಷಕರನ್ನು ಆಕರ್ಷಿಸಿತು, ಇದು ವಿಶ್ವದ ಅತಿ ದೊಡ್ಡ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮವಾಗಿದೆ ಎಂದು ಖಲೀಜ್ ಟೈಮ್ಸ್ ವರದಿ ಮಾಡಿದೆ. ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನಕ್ಕಾಗಿ ಪ್ರಯಾಗರಾಜ್‌ಗೆ ಪ್ರಯಾಣಿಸಿದ ಯುಎಇ ನಿವಾಸಿಗಳ ಅನುಭವಗಳನ್ನು ಗಲ್ಫ್ ನ್ಯೂಸ್ ಪ್ರದರ್ಶಿಸಿತು. ಈ ಕಾರ್ಯಕ್ರಮದಲ್ಲಿ ಜನಸಂದಣಿಯನ್ನು ನಿರ್ವಹಿಸಲು ಕೃತಕ ಬುದ್ಧಿಮತ್ತೆಯ ಬಳಕೆಯ ಬಗ್ಗೆಯೂ ಪ್ರಕಟಣೆಯು ವರದಿ ಮಾಡಿವೆ.

<><*<><>*><>

ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಅವರು, ಇಂದು ಕೇರಳಕ್ಕೆ ಒಂದು ದಿನದ ಪ್ರವಾಸ ಕೈಗೊಳ್ಳಲಿದ್ದಾರೆ. ಭೇಟಿಯ ಸಮಯದಲ್ಲಿ, ಉಪರಾಷ್ಟ್ರಪತಿಯವರು, ತಿರುವನಂತಪುರದಲ್ಲಿ ಭಾರತೀಯ ವಿಚಾರಕೇಂದ್ರವು ಆಯೋಜಿಸಿರುವ ನಾಲ್ಕನೇ ಪಿ.ಪರಮೇಶ್ವರನ್ ಸ್ಮಾರಕ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಷಣ ಮಾಡಲಿದ್ದಾರೆ.

<><*<><>*><>

ತಂತ್ರಜ್ಞಾನದ ಸಮರ್ಥ ಬಳಕೆಯಿಂದಾಗಿ ಸರ್ಕಾರವು ಸಾರ್ವಜನಿಕರಿಂದ ಸಂಗ್ರಹಿಸುವ ತೆರಿಗೆಯನ್ನು ಇಂದು ಉತ್ತಮವಾಗಿ ನಿರ್ವಹಿಸುತ್ತಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ನವದೆಹಲಿಯಲ್ಲಿ ನಿನ್ನೆ ನಡೆದ ೪೯ನೇ ನಾಗರಿಕ ಖಾತೆಗಳ ದಿನಾಚರಣೆ ಕಾರ್ಯಕ್ರಮದಲ್ಲಿ ಸಾರ್ವಜನಿಕ ಹಣಕಾಸು ನಿರ್ವಹಣಾ ವ್ಯವಸ್ಥೆ - ಪಿಎಫ್‌ಎಂಎಸ್ ಶ್ಲಾಘಿಸಿದ ಸಚಿವರು, ಸರ್ಕಾರಿ ಸೇವೆಗಳು ನಾಗರಿಕರಿಗೆ ಎಲೆಕ್ಟ್ರಾನಿಕ್ ರೂಪದಲ್ಲಿ ಲಭ್ಯವಾಗುವಂತೆ ಮಾಡಲು ಸರ್ಕಾರ ಡಿಜಿಟಲ್ ಇಂಡಿಯಾ ಉಪಕ್ರಮವನ್ನು ಬೆಂಬಲಿಸುವುದನ್ನು ಮುಂದುವರೆಸಿದೆ. ಪಿಎಫ್‌ಎಂಎಸ್, ೬೦ ಕೋಟಿ ಫಲಾನುಭವಿಗಳಿಗೆ ಪಾರದರ್ಶಕ ಸೇವೆ ಒದಗಿಸುತ್ತಿದೆ ಎಂದರು. ಭಾರತೀಯ ನಾಗರಿಕ ಖಾತೆ ಸೇವಾ ಅಧಿಕಾರಿಗಳ ಪಾತ್ರವನ್ನು ಶ್ಲಾಘಿಸಿದ ಅವರು, ಪ್ರಸಕ್ತ ಹಣಕಾಸು ವರ್ಷದಲ್ಲಿ ಇಲಾಖೆಯು, ಪಿಂಚಣಿದಾರರ ೧೭ ಸಾವಿರಕ್ಕೂ ಹೆಚ್ಚು ಕುಂದು-ಕೊರತೆಗಳನ್ನು ಪರಿಹರಿಸಿದೆ ಎಂದು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದರು.

<><*<><>*><>

ಕಳೆದ ವರ್ಷ ಇದೇ ತಿಂಗಳಿಗೆ ಹೋಲಿಸಿದರೆ ಫೆಬ್ರವರಿಯಲ್ಲಿ ಭಾರತದ ಒಟ್ಟು ಸರಕು ಮತ್ತು ಸೇವಾ ತೆರಿಗೆ, ಜಿಎಸ್‌ಟಿ ಸಂಗ್ರಹ ಶೇಕಡ ೯.೧ ರಷ್ಟು ಏರಿಕೆಯಾಗಿ ೧.೮೪ ಲಕ್ಷ ಕೋಟಿ ರೂಪಾಯಿಗಳಿಗೆ ತಲುಪಿದೆ. ಫೆಬ್ರವರಿಯಲ್ಲಿ ಸತತ ೧೨ ನೇ ತಿಂಗಳು ೧.೭ ಲಕ್ಷ ಕೋಟಿ ರೂಪಾಯಿಗಳಿಗೂ ಹೆಚ್ಚು ಸಂಗ್ರಹವಾಗಿದೆ. ಅಂಕಿಅಂಶಗಳ ಪ್ರಕಾರ, ಇದರಲ್ಲಿ ೩೫ ಸಾವಿರ ೨೦೪ ಕೋಟಿ ರೂಪಾಯಿ ಕೇಂದ್ರ ಜಿಎಸ್‌ಟಿ, ೪೩ ಸಾವಿರದ ೭೦೪ ಕೋಟಿ ರೂಪಾಯಿ ರಾಜ್ಯ ಜಿಎಸ್‌ಟಿ, ೯೦ ಸಾವಿರದ ೮೭೦ ಕೋಟಿ ರೂಪಾಯಿ ಸಮಗ್ರ ಜಿಎಸ್‌ಟಿ ಮತ್ತು ೧೩ ಸಾವಿರದ ೮೬೮ ಕೋಟಿ ರೂಪಾಯಿ ಸೆಸ್ ರೂಪದಲ್ಲಿ ಸಂಗ್ರಹವಾಗಿದೆ. ಫೆಬ್ರವರಿಯಲ್ಲಿ ನೀಡಲಾದ ಒಟ್ಟು ೨೦ ಸಾವಿರದ ೮೮೯ ಕೋಟಿ ರೂಪಾಯಿ ಮೊತ್ತದ ಮರುಪಾವತಿಗಳಾಗಿವೆ. ಒಟ್ಟು ಜಿಎಸ್‌ಟಿ ಆದಾಯ, ದೇಶೀಯ ಆದಾಯದಲ್ಲಿ ಶೇಕಡ ೧೦.೨ ರಷ್ಟು ಏರಿಕೆಯಾಗಿ ಫೆಬ್ರವರಿಯಲ್ಲಿ ೧.೪೨ ಲಕ್ಷ ಕೋಟಿ ರೂಪಾಯಿಗಳು ಮತ್ತು

ಆಮದುಗಳಿಂದ ಬರುವ ಆದಾಯದಲ್ಲಿ ಶೇಕಡ ೫.೪ ರಷ್ಟು ಏರಿಕೆಯಾಗಿ ಫೆಬ್ರವರಿಯಲ್ಲಿ ೪೧ ಸಾವಿರದ ೭೦೨ ಕೋಟಿ ರೂಪಾಯಿಗಳಿಗೆ ತಲುಪಿದೆ. ಫೆಬ್ರವರಿ ೨೦೨೪ ರಲ್ಲಿ ಒಟ್ಟು ಜಿಎಸ್‌ಟಿ ಆದಾಯ ೧.೬೮ ಲಕ್ಷ ಕೋಟಿ ರೂಪಾಯಿಯಾಗಿದ್ದು, ಈ ವರ್ಷದ ಜನವರಿಯಲ್ಲಿ ಜಿಎಸ್‌ಟಿ ಸಂಗ್ರಹ ೧.೯೬ ಲಕ್ಷ ಕೋಟಿ ರೂಪಾಯಿಯೊಂದಿಗೆ ವಾರ್ಷಿಕ ಶೇಕಡ ೧೨.೩ ರಷ್ಟು ಏರಿಕೆ ಕಂಡಿದೆ.

<><*<><>*><>

ಕೇಂದ್ರ ಆರೋಗ್ಯ, ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವ ಜೆ.ಪಿ.ನಡ್ಡಾ ಅವರು ನಿನ್ನೆ ಜಮ್ಮು-ಕಾಶ್ಮೀರದ ಮಾತಾ ವೈಷ್ಣೋದೇವಿ ದೇಗುಲಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಸಚಿವ ಜೆ.ಪಿ.ನಡ್ಡಾ ಅವರೊಂದಿಗೆ ಬಾಹ್ಯಾಕಾಶ, ಸಾರ್ವಜನಿಕ ಕುಂದುಕೊರತೆ ಮತ್ತು ಪಿಂಚಣಿ ಖಾತೆ ರಾಜ್ಯ ಸಚಿವ ಡಾ.ಜಿತೇಂದ್ರ ಸಿಂಗ್ ಉಪಸ್ಥಿತರಿದ್ದರು. ಇದಕ್ಕೂ ಮುನ್ನ ಕತ್ರಾಗೆ ಆಗಮಿಸಿದ ಸಚಿವರನ್ನು ಮಾತಾ ವೈಷ್ಣೋದೇವಿ ದೇಗುಲ ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಂಶುಲ್ ಗರ್ಗ್ ಅವರು ಬರಮಾಡಿಕೊಂಡರು ಮತ್ತು ಕಾಕ್ರಿಯಲ್‌ನಲ್ಲಿ ಸ್ಥಾಪಿಸಲಾಗುತ್ತಿರುವ ಮುಂಬರುವ ವೈದ್ಯಕೀಯ ಕಾಲೇಜು ಸೇರಿದಂತೆ ಮಾತಾ ವೈಷ್ಣೋದೇವಿ ದೇಗುಲ ಮಂಡಳಿಯು ಕೈಗೊಂಡ ವಿವಿಧ ಉಪಕ್ರಮಗಳ ಬಗ್ಗೆ ಕೇಂದ್ರ ಸಚಿವರಿಗೆ ಮಾಹಿತಿ ನೀಡಿದರು.

<><*<><>*><>

ದೇಶಾದ್ಯಂತ ಇಂದಿನಿಂದ ರಂಜಾನ್ ಹಬ್ಬವನ್ನು ಸಡಗರ-ಸಂಭ್ರಮದಿಂದ ಆಚರಿಸಲಾಗುತ್ತದೆ. ಕಳೆದ ರಾತ್ರಿ ವಿವಿಧ ಮಸೀದಿಗಳಲ್ಲಿ ಮುಸ್ಲೀಂ ಬಾಂಧವರು 'ತ್ರವೀಹ್' ಎಂಬ ವಿಶೇಷ ಪ್ರಾರ್ಥನೆಯನ್ನು ಕೈಗೊಂಡರು. ರಂಜಾನ್, ಇಸ್ಲಾಮ್ ಕ್ಯಾಲೆಂಡರ್‌ನ ೯ ತಿಂಗಳಾಗಿದ್ದು, ಈ ತಿಂಗಳ ಅಂತ್ಯದಲ್ಲಿ ಈದ್ ಉಲ್ ಫಿತರ್ ಅನ್ನ ಆಚರಿಸಲಾಗುತ್ತದೆ. ಈ ನಡುವೆ ರಂಜಾನ್ ಅವಧಿಯಲ್ಲಿ ಗಾಜಾದಲ್ಲಿ ತಾತ್ಕಾಲಿಕ ಕದನ ವಿರಾಮ ಪ್ರಸ್ತಾಪಕ್ಕೆ ಇಸ್ರೇಲ್ ಒಪ್ಪಿಗೆ ಸೂಚಿಸಿದೆ.

<><*<><>*><>

ಉಕ್ರೇನ್ ಅಧ್ಯಕ್ಷ ವಲಾದಿಮಿರ್ ಜೆಲನ್‌ಸ್ಕಿ, ನಿನ್ನೆ ಲಂಡನ್‌ನಲ್ಲಿ ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಅವರನ್ನು ಭೇಟಿಯಾದರು. ಈ ವೇಳೆ ನಡೆದ ಸಭೆಯಲ್ಲಿ ಬ್ರಿಟನ್ ಉಕ್ರೇನ್‌ಗೆ ೨.೮ ಶತಕೋಟಿ ಅಮೆರಿಕ ಡಾಲರ್ ಸಾಲ ನೀಡಲು ಒಪ್ಪಿಗೆ ಸೂಚಿಸಿದೆ. ಈ ಸಾಲ ಉಕ್ರೇನ್ ರಕ್ಷಣಾ ಸಾಮರ್ಥ್ಯವನ್ನ ಹೆಚ್ಚಿಸಲಿದ್ದು, ಇದನ್ನು ವಶಪಡಿಸಿಕೊಂಡಿರುವ ರಷ್ಯಾದ ಸ್ವತ್ತುಗಳಿಂದ ಬರುವ ಆದಾಯದಿಂದ ಮರು ಪಾವತಿಸಲಾಗುವುದು ಎಂದು ಅಧ್ಯಕ್ಷ ಜೆಲನ್‌ಸ್ಕಿ ಹೇಳಿದ್ದಾರೆ.

<><*<><>*><>

ಪಾಕ್ತಿಸ್ತಾನದ ಕರಾಚಿಯಲ್ಲಿ ನಿನ್ನೆ ನಡೆದ ದಕ್ಷಿಣ ಆಫ್ರಿಕಾ ಹಾಗೂ ಇಂಗ್ಲೆಂಡ್ ನಡುವಿನ ಐಸಿಸಿ ಚಾಂಪಿಯನ್ಸ್ ಟ್ರೋಫಿ ಏಕದಿನ ಕ್ರಿಕೆಟ್ ಪಂದ್ಯಾವಳಿಯ 'ಬಿ' ಗುಂಪಿನ ಪಂದ್ಯದಲ್ಲಿ ಜಯ ಗಳಿಸುವ ಮೂಲಕ ದಕ್ಷಿಣ ಆಫ್ರಿಕಾ ತಂಡ ಸೆಮಿಫೈನಲ್ ಹಂತಕ್ಕೆ ಅರ್ಹತೆ ಪಡೆದಿದೆ. ಇಂಗ್ಲೆಂಡ್ ನೀಡಿದ್ದ ೧೮೦ ರನ್ ಗುರಿ ಬೆನ್ನತ್ತಿದ ದಕ್ಷಿಣ ಆಫ್ರಿಕ ೨೯.೧ ಓವರ್‌ಗಳಲ್ಲಿ ೩ ವಿಕೆಟ್ ನಷ್ಟಕ್ಕೆ ೧೮೧ ರನ್ ಗಳಿಸಿ 'ಬಿ' ಗುಂಪಿನ ಅಂಕಪಟ್ಟಿಯಲ್ಲಿ ಮೊದಲನೇ ಸ್ಥಾನಕ್ಕೇರಿತು. ಇಂದು ದುಬೈ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿರುವ ಭಾರತ ಹಾಗೂ ನ್ಯೂಸಿಲೆಂಡ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ಭಾರತೀಯ ಕಾಲಮಾನ ಮಧ್ಯಾಹ್ನ ೨.೩೦ ಕ್ಕೆ ಆರಂಭವಾಗಲಿದೆ.

<><*<><>*><>

ದುಬೈ ಓಪೆನ್ ಟೆನಿಸ್ ಪಂದ್ಯಾವಳಿಯಲ್ಲಿ ಭಾರತದ ಯೂಕಿ ಭಾಂಬ್ರಿ ಮತ್ತು ಆಸ್ಟ್ರೇಲಿಯಾದ ಅಲೆಕ್ಸಿ ಪೊಪಿರಿನ್ ಜೋಡಿ, ಪುರುಷರ ಡಬಲ್ಸ್ ವಿಭಾಗದ ಪ್ರಶಸ್ತಿಯನ್ನು ಗೆದಿದ್ದಾರೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ <>*><>